# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೧೨, ಮಾರ್ಚ್, ೨೦೨೬(ಫಾಲ್ಗುಣ, ೨೧, ಶಕವರ್ಷ, ೧೯೪೭)<br>BENGALURU, THURSDAY, 12, MARCH, 2026 (PHALGUNA, 21, SHAKAVARSHA, 1947) | ನಂ. ೨೦೬<br>No. 206 |
|---|---|---|


## GOVERNMENT OF KARNATAKA

No. LAW-LAC/126/2025

The Karnataka Government Secretariat
Vidhana Soudha,
Dr.B.R.Ambedkar Veedhi,
Bengaluru, dated:12.03.2026

### NOTIFICATION

Whereas the draft of the following rules to further to amend the Karnataka Judicial Service (Recruitment) Rules, 2004 was published in Notification No. LAW-LAC/126/2025 dated: 17.12.2025 in Part IV-A of the Karnataka Gazette Extraordinary dated 17.12.2025 inviting objections and suggestions from all persons likely to be affected thereby within fifteen days from the date of publication of the draft in the Official Gazette.

And Whereas, the said Gazette was made available to the public on 17.12.2025.

And whereas objections and suggestions received on this behalf have been considered by the State Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely: -

### RULES

**1. Title and commencement.-** (1) These rules may be called the Karnataka Judicial Service (Recruitment) (Amendment) Rules, 2025.

(2) They shall come into force from the date of their final publication in the Official Gazette.

**2. Substitution of rule 2.-** In the Karnataka Judicial Service (Recruitment) Rules, 2004 (hereinafter referred to as the said rules), for rule 2, the following shall be substituted, namely:-

**“2. Definitions.**-

In these rules, unless the context requires otherwise-

(a) “Country” means India;
(b) “Government” means the Government of Karnataka;
(c) “Governor” means the Governor of Karnataka;
(d) “High Court” means the High Court of Karnataka;
(e) “High Courts” means any of the High Courts in India;
(f) “LDCE” means Limited Departmental Competitive Examination;
(g) “Officer” means an Officer of the Karnataka Judicial Service;
(h) “Official Gazette” means the Karnataka Gazette;
(i) “Recruiting Authority” means the High Court of Karnataka;
(j) “Service” means the Karnataka Judicial Service; and
(k) “State” means the State of Karnataka.”

**3. Amendment of rule 4.-** In rule 4 of the said rules, for the table and entries relating thereto the following table shall be substituted, namely:-

“

| **Sl. No.** | **Cadre** | ***Method of Recruitment*** | ***Qualifications, age limit, etc.*** |
|---|---|---|---|
| **(1)** | **(2)** | ***(3)*** | ***(4)*** |
| **1.** | **District Judge** | ***(1) By Promotion:***<br><br>*Fifty percent of the total posts in the cadre shall be filled by promotion from the cadre of Senior Civil Judge, on the basis of seniority-cum-merit and passing a suitability test to be conducted by the High Court.* | *Must have put in service for a period of not less than five years in the cadre of Senior Civil Judge.* |
| | | ***(2) By Promotion through LDCE:*** | *(i) Must have put in service for a period of not less than three years in* |

| | | | |
|---|---|---|---|
| | | *Twenty-five percent of the total posts in the cadre shall be filled by promotion from the cadre of Senior Civil Judge, strictly on the basis of merit through the LDCE.*<br><br>*Note-1: If any of the posts remain vacant under this category, the same shall be filled through regular promotion under item (1) in that particular year.*<br><br>*Note-2: Filling up of the vacant posts in the ratio considered for LDCE shall be carried out from the simultaneous selection process carried out for regular promotion of the same year.* | *the cadre of Senior Civil Judge; and*<br><br>*(ii) Must have completed minimum seven years of total service in the cadre of Civil Judge and Senior Civil Judge; and*<br><br>*(iii) Must have attained the age of 35 years.* |
| | | ***(3) By Direct Recruitment:***<br><br>*Twenty-five percent of the total posts in the cadre shall be filled by direct recruitment on the basis of the aggregate marks obtained in a competitive examination (written and Viva-voce) conducted by the High Court.* | *(i) Must be holder of a degree in law granted by a university established by law in India.*<br><br>*(ii) As on the last date fixed for receipt of applications –*<br><br>*(a) must be practicing as an advocate in the Supreme Court of India or High Courts or District and Trial Courts in the Country and must have so practiced continuously for a period of not less than seven years; or must be* |

| | | | |
|---|---|---|---|
| | | | *working as a Public Prosecutor/ Assistant Public Prosecutor/ Government Counsel in full time employment of the Central Government or State Governments of the Country and must have so worked for a period of not less than seven years.*<br><br>*(b) must have attained the age of 35 years; and must not have attained the age of 48 years in the case of candidates belonging to Scheduled Castes or Scheduled Tribes and 45 years in the case of others.*<br><br>***Note:*** *The maximum age limit is relaxed by three years in the case of Ex-servicemen candidates.* |
| **2.** | **Senior Civil Judge** | ***(1) By Promotion:***<br><br>*Ninety percent of the total posts in the cadre shall be filled by promotion from the cadre of Civil Judge, on the basis of seniority-cum-merit and passing a suitability test to be conducted by the High Court.* | *Must have put in service for a period of not less than five years in the cadre of Civil Judge.* |
| | | ***(2) By Promotion through LDCE:***<br><br>*Ten percent of the total posts in the cadre shall be filled by promotion from the cadre of Civil Judge,* | *Must have put in service for a period of not less than three years in the cadre of Civil Judge, excluding the period of one year training undergone.* |

| | | | |
|---|---|---|---|
| | | *strictly on the basis of merit through the LDCE.*<br><br>*Note-1: If any of the posts remain vacant under this category, the same shall be filled through regular promotion under item (1) in that particular year.*<br><br>*Note-2: Filling up of the vacant posts in the ratio considered for LDCE shall be carried out from the simultaneous selection process carried out for regular promotion of the same year.* | |
| **3.** | **Civil Judge** | By direct recruitment on the basis of aggregate marks obtained in a competitive examination (written and Viva-voce) conducted by High Court. | (i) Must be holder of a degree in law granted by a university established by law in India.<br><br>(ii) As on the last date fixed for receipt of application,-<br><br>(a) must be practicing as an advocate in the Supreme Court of India or High Courts or District and Trial Courts in the Country and must have so practiced continuously for a period of not less than three years; or must be working as a Public Prosecutor/Assistant Public Prosecutor/ Government Counsel in full time employment of the Central Government |

| | | | |
|---|---|---|---|
| | | | or State Governments of the Country and must have so worked for a period of not less than three years.<br><br>(b) must not have completed 40 years of age in the case of candidates belonging to any of the Scheduled Castes or Scheduled Tribes or Category-I of the Backward Classes; 38 years of age in the case of candidates belonging to any of the Category-II(a) or II(b) or Ill(a) or III(b) of Other Backward Classes; and 35 years of age in the case of any other candidates.<br><br>**Note:** The maximum age limit is relaxed by 3 years in the case of Ex-servicemen candidates. |

4. **Insertion of new rules 4-A, 4-B, 4-C and 4-D.-** In the said rules, after rule 4 the following rules shall be inserted, namely:-

**"4-A. Procedure for promotion to the cadre of District Judge on the basis of seniority-cum- merit (50% category).-**

(1) Zone of consideration shall be 1:2 of the available/anticipated vacancies.

(2) The criteria to assess the merit and suitability of the Officer for promotion shall be as hereunder, consisting of maximum 125 marks:

(a) Assessment of judgments rendered by the Officer during the period of five years preceding the month during which promotion of the Officer is being considered - 70 marks;

(b) Consideration of Annual Confidential Records of the Officer for a period of five years preceding the year during which promotion of the Officer is being considered - 15 marks;

(c) Consideration of percentage of disposal of cases by the Officer, against the quota fixed, for a period of five years preceding the year during which promotion of the Officer is being considered - 15 marks;

(d) Viva-voce – 25 marks.

The Officer shall be tested on the following aspects, namely:-

(i) Updated knowledge of Law;

(ii) General perceptions and awareness; and

(iii) Communication skills.

(3) Where the concerned Officer has been working or worked on a post in which he does not have to write judgments, such as a deputation post in the High Court or any other Authority or Forum or Government etc., the judgments rendered and percentage of disposal of cases, prior to such postings shall be considered.

(4) An Officer shall secure minimum 50% of the aggregate marks prescribed under clause 2(a) to 2(c) above to be eligible for Viva-voce and shall secure minimum 25% of the marks prescribed for Viva-voce, to be successful in Viva-voce.

(5) The Officers who have secured minimum 50% of the aggregate marks prescribed under clause 2(a) to 2(c) above and minimum 25% of the marks prescribed for Viva-voce, shall be eligible to be considered for promotion, in the order of seniority.

(6) Notwithstanding anything contained in rule 4-A, the High Court, upon consideration of any of the remarks recorded in the Annual Confidential Records and percentage of disposal of cases against the quota fixed during the past five years; and the nature and gravity of the complaint/s and/or Disciplinary Inquiry/ies, if any, pending or contemplated, in respect of the Officer who is successful in the aforesaid assessment and Viva-voce, if arrives at the opinion that the Officer does not deserve or is not eligible for promotion, the High Court for the reasons to be recorded in writing, may take suitable decision in this regard.

**4-B. Procedure for promotion to the cadre of District Judge, strictly on the basis of merit through LDCE (25% category).-**

(1) The criteria to assess the merit and suitability of the Officer for promotion shall be as hereunder, consisting of maximum 125 marks:

(a) Written examination shall be of one paper of 3 hours duration carrying 100 marks consisting of following 2 parts, with maximum 50 marks for each of the parts,-

(i) Constitutional and Civil Laws; and
(ii) Criminal Laws

(b) Viva-voce – 25 marks

The Officer shall be tested on the following aspects, namely:-

(i) Updated knowledge of Law;
(ii) General perceptions and awareness; and
(iii) Communication skills.

(2) Minimum marks to be secured for pass in the written examination shall be 50.

(3) From among the Officers who are successful in the written examination, as far as may be, such number of Officers as is equal to three times the number of vacancies notified, selected in the order of merit, shall be called for Viva-voce. An Officer shall secure minimum 25% of the marks prescribed for Viva-voce, to be successful in Viva-voce.

(4) A list of Officers who are eligible for promotion shall be prepared consisting such number of Officers, as far as may be, as is equal to the number of vacancies notified, in the order of merit, on the basis of the aggregate of marks secured in the written examination and the Viva-voce.

(5) The maximum number of attempts to appear in LDCE shall be 3 (three).

(6) Notwithstanding anything contained in rule 4-B, the High Court, upon consideration of any of the remarks recorded in the Annual Confidential Records and percentage of disposal of cases against the quota fixed during the past three years; and the nature and gravity of the complaint/s and/or Disciplinary Inquiry/ies, if any, pending or contemplated, in respect of the Officer who is successful in the written examination and Viva-voce, if arrives at the opinion that the Officer does not deserve or is not eligible for promotion, the High Court for the reasons to be recorded in writing, may take suitable decision in this regard.

**4-C. Procedure for promotion to the cadre of Senior Civil Judge on the basis of seniority-cum-merit (90% category).-**

(1) Zone of consideration shall be 1:2 of the available/anticipated vacancies.

(2) The criteria to assess the merit and suitability of the Officer for promotion shall be as hereunder, consisting of maximum 125 marks:

(a) Assessment of judgments rendered by the Officer during the period of five years preceding the month during which promotion of the Officer is being considered - 90 marks;

(b) Consideration of Annual Confidential Records of the Officer for a period of five years preceding the year during which promotion of the Officer is being considered - 20 marks;

(c) Consideration of percentage of disposal of cases by the Officer, against the quota fixed, for a period of five years preceding the year during which promotion of the Officer is being considered -15 marks.

(3) Where the concerned Officer has been working or worked on a post in which he does not have to write judgments, such as a deputation post in the High Court or any other Authority or Forum or Government etc., the judgments rendered and percentage of disposal of cases, prior to such postings shall be considered.

(4) The Officers who have secured minimum 50% of the aggregate marks prescribed under clause 2(a) to 2(c) above shall be eligible to be considered for promotion, in the order of seniority.

(5) Notwithstanding anything contained in rule 4-C, the High Court, upon consideration of any of the remarks recorded in the Annual Confidential Records and percentage of disposal of cases against the quota fixed during the past five years; and the nature and gravity of the complaint/s and/or Disciplinary Inquiry/ies, if any, pending or contemplated, in respect of the Officer who is successful in the aforesaid assessment, if arrives at the opinion that the Officer does not deserve or is not eligible for promotion, the High Court for the reasons to be recorded in writing, may take suitable decision in this regard.

**4-D. Procedure for promotion to the cadre of Senior Civil Judge by promotion, strictly on the basis of merit through LDCE (10% category).-**

(1) The criteria to assess the merit and suitability of the Officer for promotion shall be as hereunder, consisting of maximum 125 marks:

(a) Written examination shall be of one paper of 3 hours duration carrying 100 marks on the following subjects, namely:-

(i) Constitutional & Civil Laws.

(ii) Criminal Laws.

(iii) The Indian Evidence Act, 1872 and Bharathiya Sakshya Adhiniyam, 2023.

(iv) Special Laws.

(b) Viva-voce - 25 marks

The Officer shall be tested on the following aspects, namely:-

(i) Updated knowledge of Law;

(ii) General perceptions and awareness; and

(iii) Communication skills.

(2) Minimum marks to be secured for pass in the written examination shall be 50.

(3) From among the Officers who are successful in the written examination, as far as may be, such number of Officers as is equal to three times the number of vacancies notified, selected in the order of merit, shall be called for Viva-voce. An Officer shall secure minimum 25% of the marks prescribed for Viva-voce, to be successful in Viva-voce.

(4) A list of Officers who are eligible for promotion shall be prepared consisting such number of Officers, as far as may be, as is equal to the number of vacancies notified, in the order of merit, on the basis of the aggregate of marks secured in the written examination and the Viva-voce.

(5) The maximum number of attempts to appear in LDCE shall be 3 (three).

(6) Notwithstanding anything contained in rule 4-D, the High Court, upon consideration of any of the remarks recorded in the Annual Confidential Records and percentage of disposal of cases against the quota fixed during the past three years; and the nature and gravity of the complaint/s and/or Disciplinary Inquiry/ies, if any, pending or contemplated, in respect of the Officer who is successful in the written examination and Viva-voce, if arrives at the opinion that the Officer does not deserve or is not eligible for promotion, the High Court for the reasons to be recorded in writing, may take suitable decision in this regard."

**5. Amendment of rule 5.-** In rule 5 of the said rules,-

(i) for sub-rule I, the following heading shall be inserted, namely:-

**"Procedure for Direct Recruitment of District Judges"**

(ii) in sub-rule I,-

(a) for clause (1), the following shall be substituted, namely:-

“(1) Minimum marks for pass in the Preliminary Examination shall be 50 for candidates belonging to Scheduled Castes or Scheduled Tribes or Persons with Benchmark Disability category and 60 for others.”

(b) for clause (2), the following shall be substituted, namely:-

“(2) The minimum marks for pass in each paper of the written examination carrying 150 marks, shall be 50 marks in each paper for candidates belonging to the Scheduled Castes or Scheduled Tribes or Persons with Benchmark Disability category and 60 marks for others. However, total marks to be secured for pass in the written examination shall be 120 marks out of 300 for the candidates belonging to Scheduled Castes/Scheduled Tribes/Persons with Benchmark Disability category and 150 marks out of 300 for others.”

(c) for clause (4), the following shall be substituted, namely:-

“(4) Candidates belonging to Scheduled Castes or Scheduled Tribes or Persons with Benchmark Disability category who obtains minimum of 20% marks and candidates not belonging to a Scheduled Castes or Scheduled Tribes or Persons with Benchmark Disability category, who obtains minimum of 25% marks in the Viva-voce shall be eligible to be considered for selection to the posts.

A candidate belonging to the Scheduled Castes/Scheduled Tribes/Persons with Benchmark Disability category has to secure the following minimum marks in the Preliminary Examination, Main Written Examination and Viva-voce in order to be considered for selection under General Category, namely:-

| | |
|---|---|
| Preliminary Examination | 60 Marks |
| Main Written Examination | 60 marks in each paper. However, total marks to be secured in the written examination shall be 150 out of 300. |
| Viva-voce | 25% of marks |

”

(iii) for sub-rule II, the following heading shall be inserted, namely:-

**“Procedure for Direct Recruitment of Civil Judges”**

(iv) in sub-rule II, in clause (1), in sub-clause (e),-

(a) for item (i), the following shall be substituted, namely:-

“(i) Minimum marks for pass in the Preliminary Examination shall be 50 for candidates belonging to Scheduled Castes or Scheduled Tribes or Persons with Benchmark Disability Category and 60 for others.”

(b) for items (ii) and (iii), the following shall be substituted, namely:-

“(ii) Minimum marks for pass in each paper of the Written Examination shall be 40 for candidates belonging to Scheduled Castes or Scheduled Tribes or Persons with Benchmark Disability category and 50 for others.

(iii) Minimum marks for pass in the Viva-voce shall be 20% of marks for candidates belonging to Scheduled Castes or Scheduled Tribes or Persons with Benchmark Disability category and 25% of marks for others:

Provided that, no candidate who has secured less than the minimum marks specified above:

(i) in any paper of the Written Examination shall be eligible for Viva-voce.

(ii) in any paper of the Written Examination or in Viva-voce shall be eligible for appointment as Civil Judge.

A candidate belonging to the Scheduled Castes/Scheduled Tribes/ Persons with Benchmark Disability category has to secure the following minimum marks in the Preliminary Examination, Main Written Examination and Viva-voce in order to be considered for selection under General Category:

| | |
|---|---|
| Preliminary Examination | 60 marks |
| Main Written Examination | 50 marks in each paper |
| Viva-voce | 25% of marks |

”

(v) in sub-rule II, after clause (5), the following shall be inserted, namely:-

"(6) The candidates who are appointed to the post of Civil Judge pursuant to their selection through direct recruitment must compulsorily undergo training for a period of not less than 1 year, before presiding the Court."

**6. Insertion of new rule.-** In the said rules, after rule 5, the following rule shall be inserted, namely:-

**"5-A. Practicing Certificate for Direct Recruitment.-**

**(1) District Judges.-**

(i) Must furnish a Certificate stating that the candidate is a practicing advocate as on the date of issue of such certificate and indicating the length of continuous practice:

(a) issued by the Presiding Officer of the Court in which the candidate is actually practicing, if he is practicing before the District and Trial Courts in the Country;

(b) issued by the Registrar (Judicial)/Additional Registrar General of the High Courts, if the candidate is practicing before the High Courts;

(c) issued by an Officer of the Supreme Court of India designated for this purpose, if the candidate is practicing before the Supreme Court of India.

(ii) While computing the period of practice,-

(a) in case of a candidate who is practicing advocate, the period, if any, during which he has held the post of Public Prosecutor/Assistant Public Prosecutor/Government Counsel in full time employment of the Central Government or State Governments of the Country, immediately preceding the period of practice as an advocate, shall be considered; and

(b) in case of a candidate who is working as a Public Prosecutor/Assistant Public Prosecutor/Government Counsel in full time employment of the Central Government or State Governments of the Country, the period of practice as an advocate, if any, by him, immediately preceding such appointment, shall be considered. Such candidate shall furnish the certificate of practice obtained from the Court where he was practicing immediately preceding his appointment.

**(2) Civil Judges.-**

(i) Must furnish a Certificate stating that the candidate is a practicing advocate as on the date of issue of such certificate and indicating the length of continuous practice:

(a) issued either by the Principal Judicial Officer of the Court in which the candidate is actually practicing or by an advocate of that Court having a minimum standing of ten years duly endorsed by the Principal Judicial Officer of such District or a Principal Judicial Officer at such a station, if he is practicing before the District and Trial Courts in the Country;

(b) issued by an advocate who has a minimum standing of ten years, duly endorsed by an Officer designated by Supreme Court of India/High Courts for this purpose, if the candidate is practicing before the Supreme Court of India/High Courts, as the case may be.

(ii) While computing the period of practice,-

(a) in case of a candidate who is practicing advocate, the period, if any, during which he has held the post of Public Prosecutor/Assistant Public Prosecutor/Government Counsel in full time employment of the Central Government or State Governments of the Country, immediately preceding the period of practice as an advocate, shall be considered;

(b) in case of a candidate who is working as a Public Prosecutor/Assistant Public Prosecutor/ Government Counsel in full time employment of the Central Government or State Governments of the Country, the period of practice as an advocate, if any, by him, immediately preceding such appointment, shall be considered. Such candidate shall furnish the certificate of practice obtained from the Court where he was practicing immediately preceding his appointment;

(c) the date of provisional enrollment/registration of the candidate with the concerned State Bar Council shall be considered; and

(d) the period, if any, worked by the candidate as Law Clerk/Research Assistant with any of the Judges or Judicial Officers in the Country, shall be considered.”

**7. Insertion of new rules 11-A and 11-B.-** After rule 11 of said rules, the following new rules shall be inserted, namely:-

**"11-A. Norms.-**

In addition to these rules, the High Court may frame the norms or guidelines with regard to the different aspects of the suitability test to assess the merit of the Officer for promotion.

**11-B. Interpretation.-**

If any question arises relating to the interpretation of these rules, the decision of the High Court shall be final."

By order and in the name of
Governor of Karnataka

(Lalitha)
Additional Secretary to
Government(Admin-1),
Law, Justice and Human Rights
Department

**ಕರ್ನಾಟಕ ಸರ್ಕಾರ**

ಸಂಖ್ಯೆ. ಲಾ -ಎಲ್ಎಸಿ/126/2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:12.03.2026

**ಅಧಿಸೂಚನೆ**

ಕರ್ನಾಟಕ ನ್ಯಾಯಾಂಗ ಸೇವಾ (ನೇಮಕಾತಿ) ನಿಯಮಗಳು, 2004 ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 17.12.2025 ರ ಅಧಿಸೂಚನೆ ಸಂಖ್ಯೆ ಲಾ-ಎಲ್ ಎಸಿ/126/2025 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 17.12.2025 ರ ಕರ್ನಾಟಕ ರಾಜ್ಯಪತ್ರದ ಭಾಗ IV-ಎ ರಲ್ಲಿ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 17.12.2025 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ನಿಯಮಗಳ ಬಗ್ಗೆ ಆಕ್ಷೇಪಣೆ ಮತ್ತು ಸಲಹೆಗಳು ಸ್ವೀಕೃತವಾಗಿದ್ದು ಅವುಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ;

ಈಗ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

1**. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ನ್ಯಾಯಾಂಗ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 2ಕ್ಕೆ ಪ್ರತ್ಯಾಯೋಜನೆ**.- ಕರ್ನಾಟಕ ನ್ಯಾಯಾಂಗ ಸೇವಾ (ನೇಮಕಾತಿ) ನಿಯಮಗಳು, 2004ರಲ್ಲಿ (ಇನ್ನು ಮುಂದೆ ಇದನ್ನು ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 2ರ ಬದಲಾಗಿ ಈ ಕೆಳಗಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"2. **ಪರಿಭಾಷೆಗಳು**.-

ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು-

(ಎ) "ದೇಶ" ಎಂದರೆ, ಭಾರತ;

(ಬಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಸಿ) "ರಾಜ್ಯಪಾಲ" ಎಂದರೆ, ಕರ್ನಾಟಕದ ರಾಜ್ಯಪಾಲರು;

(ಡಿ) "ಉಚ್ಚ ನ್ಯಾಯಾಲಯ" ಎಂದರೆ, ಕರ್ನಾಟಕ ಉಚ್ಚ ನ್ಯಾಯಾಲಯ;

(ಇ) "ಉಚ್ಚ ನ್ಯಾಯಾಲಯಗಳು" ಎಂದರೆ, ಭಾರತದಲ್ಲಿನ ಯಾವುದೇ ಉಚ್ಚ ನ್ಯಾಯಾಲಯಗಳು;

(ಎಫ್) "ಎಲ್‌ಡಿಸಿಇ" ಎಂದರೆ, ಸೀಮಿತ ಇಲಾಖಾ ಸ್ಪರ್ಧಾತ್ಮಕ ಪರೀಕ್ಷೆ;

(ಜಿ) "ಅಧಿಕಾರಿ" ಎಂದರೆ, ಕರ್ನಾಟಕ ನ್ಯಾಯಾಂಗ ಸೇವೆಯಲ್ಲಿರುವ ಅಧಿಕಾರಿ;

(ಎಚ್) "ಅಧಿಕೃತ ರಾಜ್ಯಪತ್ರ" ಎಂದರೆ, ಕರ್ನಾಟಕ ರಾಜ್ಯಪತ್ರ;

(ಐ) "ನೇಮಕಾತಿ ಪ್ರಾಧಿಕಾರ" ಎಂದರೆ, ಕರ್ನಾಟಕ ಉಚ್ಚ ನ್ಯಾಯಾಲಯ;

(ಜೆ) "ಸೇವೆ" ಎಂದರೆ, ಕರ್ನಾಟಕ ನ್ಯಾಯಾಂಗ ಸೇವೆ; ಮತ್ತು

(ಕೆ) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ."

3**. ನಿಯಮ 4ಕ್ಕೆ ತಿದ್ದುಪಡಿ.-** ಸದರಿ ನಿಯಮಗಳ 4ನೇ ನಿಯಮದಲ್ಲಿ, ಕೋಷ್ಟಕ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳ ಬದಲಾಗಿ ಈ ಮುಂದಿನ ಕೋಷ್ಟಕವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

| ಕ್ರಮ ಸಂಖ್ಯೆ | ವೃಂದ | ನೇಮಕಾತಿ ವಿಧಾನ | ವಿದ್ಯಾರ್ಹತೆ, ವಯೋಮಿತಿ ಇತ್ಯಾದಿ |
|---|---|---|---|
| **(1)** | **(2)** | **(3)** | **(4)** |
| 1 | **ಜಿಲ್ಲಾ ನ್ಯಾಯಾಧೀಶ** | **1. ಮುಂಬಡ್ತಿ ಮೂಲಕ:** ವೃಂದದಲ್ಲಿನ ಒಟ್ಟು ಹುದ್ದೆಗಳಲ್ಲಿ ಶೇಕಡಾ ಐವತ್ತರಷ್ಟನ್ನು, ಜ್ಯೇಷ್ಠತೆ ಹಾಗೂ ಮೆರಿಟ್ ಆಧಾರದ ಮೇಲೆ ಮತ್ತು ಉಚ್ಚ ನ್ಯಾಯಾಲಯವು ನಡೆಸುವ ಸೂಕ್ತತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಹಿರಿಯ ಸಿವಿಲ್ ನ್ಯಾಯಾಧೀಶರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು. | ಹಿರಿಯ ಸಿವಿಲ್ ನ್ಯಾಯಾಧೀಶರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ ಸೇವೆಯನ್ನು ಸಲ್ಲಿಸಿರಬೇಕು. |
| | | **(2) ಎಲ್‌ಡಿಸಿಇ ಮೂಲಕ ಮುಂಬಡ್ತಿ:** ವೃಂದದಲ್ಲಿನ ಒಟ್ಟು ಹುದ್ದೆಗಳಲ್ಲಿ ಶೇಕಡ ಇಪ್ಪತ್ತೈದರಷ್ಟನ್ನು ಎಲ್ ಡಿಸಿಇ ಮುಖಾಂತರ ಕಡ್ಡಾಯವಾಗಿ ಮೆರಿಟ್ ಆಧಾರದ ಮೇಲೆ ಹಿರಿಯ ಸಿವಿಲ್ ನ್ಯಾಯಾಧೀಶರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.<br><br>ಸೂಚನೆ-1: ಈ ಪ್ರವರ್ಗದಡಿಯಲ್ಲಿ ಯಾವುದೇ ಹುದ್ದೆಗಳು ಖಾಲಿ ಉಳಿದರೆ, ಅದನ್ನು ಆ ನಿರ್ದಿಷ್ಟ ವರ್ಷದಲ್ಲಿ (1)ನೇ ಬಾಬುವಿನ ಅಡಿಯಲ್ಲಿ ನಿಯತ ಮುಂಬಡ್ತಿಯ ಮೂಲಕ ಭರ್ತಿ ಮಾಡತಕ್ಕದ್ದು.<br><br>ಸೂಚನೆ-2: ಖಾಲಿ ಹುದ್ದೆಗಳನ್ನು ಎಲ್‌ಡಿಸಿಇಗಾಗಿ ಪರಿಗಣಿಸಲಾಗುವ ಅನುಪಾತದಲ್ಲಿ ಅದೇ ವರ್ಷ ನಿಯತ ಮುಂಬಡ್ತಿಗೆ ನಡೆಸಲಾಗುವ ಏಕಕಾಲಿಕ ಆಯ್ಕೆ ಪ್ರಕ್ರಿಯೆಯ ಮೂಲಕ ಭರ್ತಿ ಮಾಡತಕ್ಕದ್ದು. | (i) ಹಿರಿಯ ಸಿವಿಲ್ ನ್ಯಾಯಾಧೀಶರ ವೃಂದದಲ್ಲಿ ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ ಸೇವೆಯನ್ನು ಸಲ್ಲಿಸಿರಬೇಕು; ಮತ್ತು<br><br>(ii) ಸಿವಿಲ್ ನ್ಯಾಯಾಧೀಶ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರ ವೃಂದದಲ್ಲಿ ಕನಿಷ್ಠ ಏಳು ವರ್ಷಗಳ ಒಟ್ಟು ಸೇವೆಯನ್ನು ಪೂರ್ಣಗೊಳಿಸಿರಬೇಕು; ಮತ್ತು<br><br>(iii) 35 ವರ್ಷಗಳ ವಯಸ್ಸು ಪೂರ್ಣಗೊಂಡಿರಬೇಕು. |
| | | **(3) ನೇರ ನೇಮಕಾತಿ ಮೂಲಕ:**<br><br>ವೃಂದದಲ್ಲಿನ ಒಟ್ಟು ಹುದ್ದೆಗಳಲ್ಲಿ ಶೇಕಡಾ ಇಪ್ಪತ್ತೈದರಷ್ಟನ್ನು ಉಚ್ಚ ನ್ಯಾಯಾಲಯವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ (ಲಿಖಿತ ಮತ್ತು ಮೌಖಿಕ)ಯಲ್ಲಿ ಪಡೆದ ಒಟ್ಟು ಅಂಕಗಳ ಆಧಾರದ ಮೇಲೆ ನೇರ | (i) ಭಾರತದಲ್ಲಿನ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾನಿಲಯವು ನೀಡಿರುವ ಕಾನೂನು ಪದವಿಯನ್ನು ಹೊಂದಿರಬೇಕು.<br><br>(ii)ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ನಿಗದಿಪಡಿಸಲಾಗಿರುವ ಅಂತಿಮ ದಿನಾಂಕದಂದು ಇದ್ದಂತೆ- |

| | | | |
|---|---|---|---|
| | | ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು. | (ಎ) ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಅಥವಾ ದೇಶದ ಉಚ್ಚ ನ್ಯಾಯಾಲಯಗಳಲ್ಲಿ ಅಥವಾ ಜಿಲ್ಲಾ ಮತ್ತು ಅಧಿವಿಚಾರಣಾ ನ್ಯಾಯಾಲಯಗಳಲ್ಲಿ ವಕೀಲರಾಗಿ ಕಾರ್ಯನಿರ್ವಹಿಸುತ್ತಿರಬೇಕು ಮತ್ತು ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ನಿರಂತರವಾಗಿ ವೃತ್ತಿಯನ್ನು ಮಾಡಿರಬೇಕು; ಅಥವಾ ಕೇಂದ್ರ ಸರ್ಕಾರ ಅಥವಾ ದೇಶದ ರಾಜ್ಯ ಸರ್ಕಾರಗಳ ಪೂರ್ಣಾವಧಿಯ ಉದ್ಯೋಗದಲ್ಲಿ ಸರ್ಕಾರಿ ಅಭಿಯೋಜಕರು / ಸಹಾಯಕ ಸರ್ಕಾರಿ ಅಭಿಯೋಜಕರು / ಸರ್ಕಾರಿ ನ್ಯಾಯವಾದಿಯಾಗಿ ಕೆಲಸ ನಿರ್ವಹಿಸಿರಬೇಕು ಮತ್ತು ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಕಾರ್ಯ ನಿರ್ವಹಿಸಿರಬೇಕು.<br><br>(ಬಿ) 35 ವರ್ಷ ವಯಸ್ಸನ್ನು ಪೂರೈಸಿರಬೇಕು; ಮತ್ತು ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗೆ 48 ವರ್ಷ ಮತ್ತು ಇತರರಿಗೆ 45 ವರ್ಷ ವಯಸ್ಸನ್ನು ಪೂರೈಸಿರಬಾರದು.<br><br>**ಸೂಚನೆ**: ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯನ್ನು ಮೂರು ವರ್ಷಗಳವರೆಗೆ ಸಡಿಲಿಸಲಾಗಿದೆ. |
| 2 | **ಹಿರಿಯ ಸಿವಿಲ್ ನ್ಯಾಯಾಧೀಶ** | **(1) ಮುಂಬಡ್ತಿ ಮೂಲಕ:** ವೃಂದದಲ್ಲಿನ ಒಟ್ಟು ಹುದ್ದೆಗಳಲ್ಲಿ ಶೇಕಡಾ ತೊಂಬತ್ತರಷ್ಟನ್ನು ಜ್ಯೇಷ್ಠತೆ ಹಾಗೂ ಮೆರಿಟ್ ಆಧಾರದ ಮೇಲೆ ಮತ್ತು ಉಚ್ಚ ನ್ಯಾಯಾಲಯವು ನಡೆಸುವ ಸೂಕ್ತತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಸಿವಿಲ್ ನ್ಯಾಯಾಧೀಶರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು. | ಸಿವಿಲ್ ನ್ಯಾಯಾಧೀಶರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ ಸೇವೆಯನ್ನು ಸಲ್ಲಿಸಿರಬೇಕು. |

| | | | |
|---|---|---|---|
| | | **(2) ಎಲ್‌ಡಿಸಿಇ ಮೂಲಕ ಮುಂಬಡ್ತಿ:**<br>ವೃಂದದಲ್ಲಿನ ಒಟ್ಟು ಹುದ್ದೆಗಳಲ್ಲಿ ಶೇಕಡ ಹತ್ತರಷ್ಟನ್ನು ಎಲ್‌ಡಿಸಿಇ ಮುಖಾಂತರ ಕಡ್ಡಾಯವಾಗಿ ಮೆರಿಟ್ ಆಧಾರದ ಮೇಲೆ ಸಿವಿಲ್ ನ್ಯಾಯಾಧೀಶರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು.<br><br>ಸೂಚನೆ-1: ಈ ಪ್ರವರ್ಗದಡಿಯಲ್ಲಿ ಯಾವುದೇ ಹುದ್ದೆಗಳು ಖಾಲಿ ಉಳಿದರೆ, ಅದನ್ನು ಆ ನಿರ್ದಿಷ್ಟ ವರ್ಷದಲ್ಲಿ (1)ನೇ ಬಾಬುವಿನ ಅಡಿಯಲ್ಲಿ ನಿಯತ ಮುಂಬಡ್ತಿಯ ಮೂಲಕ ಭರ್ತಿ ಮಾಡತಕ್ಕದ್ದು.<br><br>ಸೂಚನೆ-2: ಖಾಲಿ ಹುದ್ದೆಗಳನ್ನು ಎಲ್‌ಡಿಸಿಇಗಾಗಿ ಪರಿಗಣಿಸಲಾಗುವ ಅನುಪಾತದಲ್ಲಿ ಅದೇ ವರ್ಷ ನಿಯತ ಮುಂಬಡ್ತಿಗೆ ನಡೆಸಲಾಗುವ ಏಕಕಾಲಿಕ ಆಯ್ಕೆ ಪ್ರಕ್ರಿಯೆಯ ಮೂಲಕ ಭರ್ತಿ ಮಾಡತಕ್ಕದ್ದು. | ಸಿವಿಲ್ ನ್ಯಾಯಾಧೀಶರ ವೃಂದದಲ್ಲಿ ಒಂದು ವರ್ಷ ತರಬೇತಿ ಅವಧಿಯನ್ನು ಹೊರತುಪಡಿಸಿ ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ ಸೇವೆಯನ್ನು ಸಲ್ಲಿಸಿರಬೇಕು. |
| 3. | **ಸಿವಿಲ್ ನ್ಯಾಯಾಧೀಶ** | ಉಚ್ಚ ನ್ಯಾಯಾಲಯವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ (ಲಿಖಿತ ಮತ್ತು ಮೌಖಿಕ) ಯಲ್ಲಿ ಪಡೆದ ಒಟ್ಟಾರೆ ಅಂಕಗಳ ಆಧಾರದ ಮೇಲೆ ನೇರ ನೇಮಕಾತಿಯ ಮೂಲಕ ಭರ್ತಿ ಮಾಡತಕ್ಕದ್ದು. | (i) ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾಗಿರುವ ವಿಶ್ವವಿದ್ಯಾನಿಲಯವು ನೀಡಿರುವ ಕಾನೂನು ಪದವಿಯನ್ನು ಪಡೆದಿರಬೇಕು.<br><br>(ii) ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕದಂದು ಇದ್ದಂತೆ,-<br><br>(ಎ) ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಅಥವಾ ದೇಶದ ಉಚ್ಚ ನ್ಯಾಯಾಲಯಗಳಲ್ಲಿ ಅಥವಾ ಜಿಲ್ಲಾ ಮತ್ತು ಅಧಿವಿಚಾರಣಾ ನ್ಯಾಯಾಲಯಗಳಲ್ಲಿ ವಕೀಲರಾಗಿ ಕಾರ್ಯನಿರ್ವಹಿಸುತ್ತಿರಬೇಕು ಮತ್ತು ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ನಿರಂತರವಾಗಿ ವೃತ್ತಿಯನ್ನು |

| | | | |
|---|---|---|---|
| | | | ಮಾಡಿರಬೇಕು; ಅಥವಾ ಕೇಂದ್ರ ಸರ್ಕಾರ ಅಥವಾ ದೇಶದ ರಾಜ್ಯ ಸರ್ಕಾರಗಳ ಪೂರ್ಣಾವಧಿಯ ಉದ್ಯೋಗದಲ್ಲಿ ಸರ್ಕಾರಿ ಅಭಿಯೋಜಕರು / ಸಹಾಯಕ ಸರ್ಕಾರಿ ಅಭಿಯೋಜಕರು / ಸರ್ಕಾರಿ ನ್ಯಾಯವಾದಿಯಾಗಿ ಕೆಲಸ ನಿರ್ವಹಿಸಿರಬೇಕು ಮತ್ತು ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಕಾರ್ಯ ನಿರ್ವಹಿಸಿರಬೇಕು.<br><br>(ಬಿ) ಯಾವುದೇ ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳು ಅಥವಾ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಗಳ ಸಂದರ್ಭದಲ್ಲಿ 40 ವರ್ಷ ವಯಸ್ಸನ್ನು ಪೂರೈಸಿರಬಾರದು; ಇತರ ಹಿಂದುಳಿದ ವರ್ಗಗಳಾದ ಪ್ರವರ್ಗ-II(ಎ) ಅಥವಾ II(ಬಿ) ಅಥವಾ III (ಎ) ಅಥವಾ III(ಬಿ) ಗೆ ಸೇರಿದ ಅಭ್ಯರ್ಥಿಗಳ ಸಂದರ್ಭದಲ್ಲಿ 38 ವರ್ಷ ವಯಸ್ಸನ್ನು ಪೂರೈಸಿರಬಾರದು ಮತ್ತು ಇತರ ಯಾವುದೇ ಅಭ್ಯರ್ಥಿಗಳ ಸಂದರ್ಭದಲ್ಲಿ 35 ವರ್ಷ ವಯಸ್ಸನ್ನು ಪೂರೈಸಿರಬಾರದು.<br><br>**ಸೂಚನೆ:** ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯನ್ನು ಮೂರು ವರ್ಷಗಳವರೆಗೆ ಸಡಿಲಿಸಲಾಗಿದೆ. |

4. **4-ಎ, 4-ಬಿ, 4-ಸಿ ಮತ್ತು 4-ಡಿ ಹೊಸ ನಿಯಮಗಳ ಸೇರ್ಪಡೆ.**- ಸದರಿ ನಿಯಮಗಳಲ್ಲಿ, 4ನೇ ನಿಯಮದ ನಂತರ ಈ ಮುಂದಿನ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:-

**"4-ಎ. ಜ್ಯೇಷ್ಠತೆ-ಹಾಗೂ-ಮೆರಿಟ್ ಆಧಾರದ ಮೇಲೆ ಜಿಲ್ಲಾ ನ್ಯಾಯಾಧೀಶ ವೃಂದಕ್ಕೆ ಮುಂಬಡ್ತಿ ನೀಡುವ ಕಾರ್ಯವಿಧಾನ (ಶೇ.50ರ ಪ್ರವರ್ಗ).-**

(1) ಪರಿಗಣಿತ ವಲಯವು ಲಭ್ಯವಿರುವ/ನಿರೀಕ್ಷಿತ ಖಾಲಿ ಹುದ್ದೆಗಳ 1:2 ಅನುಪಾತದಲ್ಲಿರತಕ್ಕದ್ದು.

(2) ಮುಂಬಡ್ತಿಗೆ ಸಂಬಂಧಿಸಿದಂತೆ ಅಧಿಕಾರಿಯ ಮೆರಿಟ್ ಮತ್ತು ಸೂಕ್ತತೆಯನ್ನು ನಿರ್ಣಯಿಸುವ ಮಾನದಂಡಗಳು, ಈ ಕೆಳಕಂಡಂತೆ ಗರಿಷ್ಠ 125 ಅಂಕಗಳನ್ನು ಒಳಗೊಂಡಿರತಕ್ಕದ್ದು:

(ಎ) ಅಧಿಕಾರಿಯ ಮುಂಬಡ್ತಿಯನ್ನು ಪರಿಗಣಿಸಲಾಗುತ್ತಿರುವ ತಿಂಗಳ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಅಧಿಕಾರಿಯು ನೀಡಿದ ತೀರ್ಪುಗಳ ಮೌಲ್ಯಮಾಪನ - 70 ಅಂಕಗಳು;

(ಬಿ) ಅಧಿಕಾರಿಯ ಮುಂಬಡ್ತಿಯನ್ನು ಪರಿಗಣಿಸಲಾಗುತ್ತಿರುವ ವರ್ಷದ ಹಿಂದಿನ ಐದು ವರ್ಷಗಳ ಅವಧಿಗೆ ಅಧಿಕಾರಿಯ ವಾರ್ಷಿಕ ಗೌಪ್ಯ ವರದಿಗಳನ್ನು ಪರಿಗಣಿಸುವುದು - 15 ಅಂಕಗಳು;

(ಸಿ) ಅಧಿಕಾರಿಯ ಮುಂಬಡ್ತಿಯನ್ನು ಪರಿಗಣಿಸಲಾಗುತ್ತಿರುವ ವರ್ಷದ ಹಿಂದಿನ ಐದು ವರ್ಷಗಳ ಅವಧಿಗೆ ನಿಗದಿಪಡಿಸಿದ ಕೋಟಾದಲ್ಲಿ ಅಧಿಕಾರಿಯು ಮೊಕದ್ದಮೆಗಳನ್ನು ಇತ್ಯರ್ಥಪಡಿಸಿದ ಶೇಕಡಾವಾರು ಪ್ರಮಾಣವನ್ನು ಪರಿಗಣಿಸುವುದು - 15 ಅಂಕಗಳು;

(ಡಿ) ಮೌಖಿಕ ಸಂದರ್ಶನ - 25 ಅಂಕಗಳು.
ಅಧಿಕಾರಿಯನ್ನು ಈ ಕೆಳಗಿನ ಅಂಶಗಳ ಮೇಲೆ ಪರೀಕ್ಷಿಸಲಾಗುತ್ತದೆ, ಅವುಗಳೆಂದರೆ:-

(i) ಇಂದಿಕೃತ ಕಾನೂನು ಜ್ಞಾನ;
(ii) ಸಾಮಾನ್ಯ ಗ್ರಹಿಕೆಗಳು ಮತ್ತು ಅರಿವು; ಮತ್ತು
(iii) ಸಂವಹನ ಕೌಶಲ್ಯಗಳು.

(3) ಸಂಬಂಧಪಟ್ಟ ಅಧಿಕಾರಿಯು ತೀರ್ಪುಗಳನ್ನು ಬರೆಯದಿರುವ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅಥವಾ ಕಾರ್ಯ ನಿರ್ವಹಿಸಿದ್ದಲ್ಲಿ ಅಂದರೆ ಉಚ್ಚ ನ್ಯಾಯಾಲಯದಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ವೇದಿಕೆ ಅಥವಾ ಸರ್ಕಾರ ಮುಂತಾದವುಗಳಲ್ಲಿ ಪ್ರತಿನಿಯೋಜನೆ ಹುದ್ದೆ, ಅಂತಹ ನಿಯೋಜನೆಗಳಿಗೆ ಮೊದಲು ನೀಡಿದ ತೀರ್ಪುಗಳನ್ನು ಮತ್ತು ಮೊಕದ್ದಮೆಗಳನ್ನು ಇತ್ಯರ್ಥಪಡಿಸಿದ ಶೇಕಡಾವಾರು ಪ್ರಮಾಣವನ್ನು ಪರಿಗಣಿಸತಕ್ಕದ್ದು.

(4) ಒಬ್ಬ ಅಧಿಕಾರಿಯು ಮೌಖಿಕ ಸಂದರ್ಶನಕ್ಕೆ ಅರ್ಹರಾಗಲು ಮೇಲಿನ 2 (ಎ) ರಿಂದ 2 (ಸಿ) ವರೆಗಿನ ಖಂಡಗಳ ಅಡಿಯಲ್ಲಿ ನಿಗದಿಪಡಿಸಿದ ಒಟ್ಟು ಅಂಕಗಳಲ್ಲಿ ಕನಿಷ್ಠ ಶೇಕಡಾ 50ರಷ್ಟು ಅಂಕಗಳನ್ನು ಪಡೆದಿರತಕ್ಕದ್ದು ಮತ್ತು ಮೌಖಿಕ ಸಂದರ್ಶನದಲ್ಲಿ ಯಶಸ್ವಿಯಾಗಲು, ಮೌಖಿಕ ಸಂದರ್ಶನಕ್ಕೆ ನಿಗದಿಪಡಿಸಿದ ಅಂಕಗಳಲ್ಲಿ ಕನಿಷ್ಠ ಶೇಕಡಾ 25ರಷ್ಟು ಅಂಕಗಳನ್ನು ಪಡೆಯತಕ್ಕದ್ದು.

(5) ಮೇಲಿನ 2 (ಎ) ರಿಂದ 2 (ಸಿ) ಖಂಡದ ಅಡಿಯಲ್ಲಿ ನಿಗದಿಪಡಿಸಿದ ಒಟ್ಟು ಅಂಕಗಳಲ್ಲಿ ಕನಿಷ್ಠ ಶೇಕಡಾ 50ರಷ್ಟು ಮತ್ತು ಮೌಖಿಕ ಸಂದರ್ಶನಕ್ಕೆ ನಿಗದಿಪಡಿಸಿದ ಅಂಕಗಳಲ್ಲಿ ಕನಿಷ್ಠ ಶೇಕಡಾ 25ರಷ್ಟು ಅಂಕಗಳನ್ನು ಪಡೆದ ಅಧಿಕಾರಿಗಳು ಜ್ಯೇಷ್ಠತೆಯ ಅನುಕ್ರಮಣಿಕೆಯಲ್ಲಿ ಮುಂಬಡ್ತಿಗೆ ಪರಿಗಣಿಸಲು ಅರ್ಹರಾಗಿರುತ್ತಾರೆ.

(6) ನಿಯಮ 4-ಎ ಯಲ್ಲಿ ಏನೇ ಇದ್ದರೂ, ಉಚ್ಚ ನ್ಯಾಯಾಲಯವು, ಮೇಲ್ಕಂಡ ಮೌಲ್ಯಮಾಪನ ಹಾಗೂ ಮೌಖಿಕ ಸಂದರ್ಶನದಲ್ಲಿ ಯಶಸ್ವಿಯಾದ ಅಧಿಕಾರಿಯ ಸಂಬಂಧದಲ್ಲಿ ವಾರ್ಷಿಕ ಗೌಪ್ಯ ವರದಿಗಳಲ್ಲಿ ದಾಖಲಾದ ಯಾವುದೇ ಷರಾಗಳನ್ನು ಮತ್ತು ಕಳೆದ ಐದು ವರ್ಷಗಳಲ್ಲಿ ನಿಗದಿಪಡಿಸಿದ ಒಟ್ಟು ಕೋಟಾದಲ್ಲಿ ಇತ್ಯರ್ಥಪಡಿಸಿದ ಮೊಕದ್ದಮೆಗಳ ಶೇಕಡಾವಾರು ಪ್ರಮಾಣವನ್ನು ಪರಿಗಣಿಸಿದ ನಂತರ; ಮತ್ತು ಬಾಕಿಯಿರುವ ಅಥವಾ

ಪರಿಗಣನೆಯಲ್ಲಿರುವ ದೂರುಗಳು ಮತ್ತು/ಅಥವಾ ಶಿಸ್ತಿನ ವಿಚಾರಣೆಗಳು ಯಾವುವಾದರೂ ಇದ್ದರೆ, ಅವುಗಳ ಸ್ವರೂಪ ಮತ್ತು ಗಂಭೀರತೆಯನ್ನು ಪರಿಗಣಿಸಿದ ನಂತರ, ಅಧಿಕಾರಿಯು ಮುಂಬಡ್ತಿಗೆ ಅರ್ಹನಲ್ಲ ಅಥವಾ ಸೂಕ್ತನಲ್ಲ ಎಂಬ ಅಭಿಪ್ರಾಯಕ್ಕೆ ಬಂದಲ್ಲಿ, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ ಉಚ್ಚ ನ್ಯಾಯಾಲಯವು ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬಹುದು.

**4-ಬಿ. ಎಲ್.ಡಿ.ಸಿ.ಇ. ಮೂಲಕ ಕಡ್ಡಾಯವಾಗಿ ಮೆರಿಟ್ ಆಧಾರದ ಮೇಲೆ ಜಿಲ್ಲಾ ನ್ಯಾಯಾಧೀಶರ ವೃಂದಕ್ಕೆ ಮುಂಬಡ್ತಿ ನೀಡುವ ಕಾರ್ಯವಿಧಾನ (ಶೇಕಡಾ 25ರಷ್ಟು ಪ್ರವರ್ಗ),-**

(1) ಮುಂಬಡ್ತಿಗಾಗಿ ಅಧಿಕಾರಿಯ ಮೆರಿಟ್ ಮತ್ತು ಸೂಕ್ತತೆಯನ್ನು ನಿರ್ಣಯಿಸುವ ಮಾನದಂಡಗಳು, ಈ ಕೆಳಗಿನಂತೆ ಗರಿಷ್ಠ 125 ಅಂಕಗಳನ್ನು ಒಳಗೊಂಡಿರುತ್ತದೆ:

(ಎ) ಲಿಖಿತ ಪರೀಕ್ಷೆಯು ಈ ಕೆಳಕಂಡ 2 ಭಾಗಗಳನ್ನು ಒಳಗೊಂಡಿದ್ದು, ಪ್ರತಿಯೊಂದು ಭಾಗಕ್ಕೂ ಗರಿಷ್ಠ 50 ಅಂಕಗಳಿರುವಂತೆ ಒಟ್ಟು 100 ಅಂಕಗಳನ್ನು ಹೊಂದಿರುವ 3 ಗಂಟೆಗಳ ಅವಧಿಯ ಒಂದು ಪತ್ರಿಕೆಯಾಗಿರತಕ್ಕದ್ದು,-

(i) ಸಾಂವಿಧಾನಿಕ ಮತ್ತು ಸಿವಿಲ್ ಕಾನೂನುಗಳು; ಮತ್ತು

(ii) ಕ್ರಿಮಿನಲ್ ಕಾನೂನುಗಳು

(ಬಿ) ಮೌಖಿಕ ಸಂದರ್ಶನ - 25 ಅಂಕಗಳು

ಅಧಿಕಾರಿಯನ್ನು ಈ ಕೆಳಗಿನ ಅಂಶಗಳ ಮೇಲೆ ಪರೀಕ್ಷಿಸತಕ್ಕದ್ದು, ಅವುಗಳೆಂದರೆ:-

(i) ಇಂದಿಕೃತ ಕಾನೂನು ಜ್ಞಾನ;

(ii) ಸಾಮಾನ್ಯ ಗ್ರಹಿಕೆಗಳು ಮತ್ತು ಅರಿವು; ಮತ್ತು

(iii) ಸಂವಹನ ಕೌಶಲ್ಯಗಳು.

(2) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕನಿಷ್ಠ 50 ಅಂಕಗಳನ್ನು ಪಡೆಯತಕ್ಕದ್ದು.

(3) ಲಿಖಿತ ಪರೀಕ್ಷೆಯಲ್ಲಿ ಯಶಸ್ವಿಯಾದ ಅಧಿಕಾರಿಗಳಲ್ಲಿ, ಸಾಧ್ಯವಾದಷ್ಟು ಮಟ್ಟಿಗೆ, ಅಧಿಸೂಚಿತ ಹುದ್ದೆಗಳ ಸಂಖ್ಯೆಯ ಮೂರು ಪಟ್ಟಿಗೆ ಸಮನಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿ ಮೌಖಿಕ ಸಂದರ್ಶನಕ್ಕೆ ಕರೆಯತಕ್ಕದ್ದು. ಮೌಖಿಕ ಸಂದರ್ಶನದಲ್ಲಿ ಯಶಸ್ವಿಯಾಗಲು ಅಧಿಕಾರಿಯು ಮೌಖಿಕ ಸಂದರ್ಶನಕ್ಕೆ ನಿಗದಿಪಡಿಸಿದ ಅಂಕಗಳಲ್ಲಿ ಕನಿಷ್ಠ ಶೇಕಡಾ 25ರಷ್ಟು ಅಂಕಗಳನ್ನು ಪಡೆಯತಕ್ಕದ್ದು.

(4) ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದಲ್ಲಿ ಪಡೆದ ಒಟ್ಟು ಅಂಕಗಳ ಆಧಾರದ ಮೇಲೆ, ಮೆರಿಟ್ ಅನುಕ್ರಮದಲ್ಲಿ, ಸಾಧ್ಯವಾದಷ್ಟು ಮಟ್ಟಿಗೆ, ಅಧಿಸೂಚಿತ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾಗಿರುವಷ್ಟು ಸಂಖ್ಯೆಯ ಅಧಿಕಾರಿಗಳನ್ನು ಒಳಗೊಂಡಂತೆ ಮುಂಬಡ್ತಿಗೆ ಅರ್ಹರಾಗಿರುವ ಅಧಿಕಾರಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(5) ಎಲ್‌ಡಿಸಿಇ ಯಲ್ಲಿ ಹಾಜರಾಗಲು ಗರಿಷ್ಠ 3 (ಮೂರು) ಪ್ರಯತ್ನಗಳನ್ನು ಮಾಡಬಹುದಾಗಿದೆ.

(6) ನಿಯಮ 4-ಬಿ ಯಲ್ಲಿ ಏನೇ ಇದ್ದರೂ, ಉಚ್ಚ ನ್ಯಾಯಾಲಯವು, ಲಿಖಿತ ಪರೀಕ್ಷೆಯಲ್ಲಿ ಹಾಗೂ ಮೌಖಿಕ ಸಂದರ್ಶನದಲ್ಲಿ ಯಶಸ್ವಿಯಾದ ಅಧಿಕಾರಿಯ ಸಂಬಂಧದಲ್ಲಿ ವಾರ್ಷಿಕ ಗೌಪ್ಯ ವರದಿಗಳಲ್ಲಿ ದಾಖಲಾದ ಯಾವುದೇ ಷರಾಗಳನ್ನು ಮತ್ತು ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಒಟ್ಟು ಕೋಟಾದಲ್ಲಿ ಇತ್ಯರ್ಥಪಡಿಸಿದ ಶೇಕಡಾವಾರು ಪ್ರಮಾಣವನ್ನು ಪರಿಗಣಿಸಿದ ನಂತರ ಮತ್ತು ಬಾಕಿಯಿರುವ ಅಥವಾ ಪರಿಗಣನೆಯಲ್ಲಿರುವ ದೂರುಗಳು ಮತ್ತು/ಅಥವಾ ಶಿಸ್ತಿನ ವಿಚಾರಣೆಗಳು ಯಾವುವಾದರೂ ಇದ್ದರೆ ಅವುಗಳ ಸ್ವರೂಪ ಮತ್ತು ಗಂಭೀರತೆಯನ್ನು ಪರಿಗಣಿಸಿದ

ನಂತರ, ಅಧಿಕಾರಿಯು ಮುಂಬಡ್ತಿಗೆ ಅರ್ಹನಲ್ಲ ಅಥವಾ ಸೂಕ್ತನಲ್ಲ ಎಂಬ ಅಭಿಪ್ರಾಯಕ್ಕೆ ಬಂದರೆ, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ ಉಚ್ಚ ನ್ಯಾಯಾಲಯವು ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬಹುದು.

**4-ಸಿ ಜ್ಯೇಷ್ಠತೆ-ಹಾಗೂ-ಮೆರಿಟ್ ಆಧಾರದ ಮೇಲೆ ಹಿರಿಯ ಸಿವಿಲ್ ನ್ಯಾಯಾಧೀಶರ ವೃಂದಕ್ಕೆ ಮುಂಬಡ್ತಿ ನೀಡುವ ಕಾರ್ಯವಿಧಾನ (ಶೇ.90ರ ಪ್ರವರ್ಗ).-**

(1) ಪರಿಗಣಿತ ವಲಯವು ಲಭ್ಯವಿರುವ/ನಿರೀಕ್ಷಿತ ಖಾಲಿ ಹುದ್ದೆಗಳ 1:2 ಅನುಪಾತದಲ್ಲಿರತಕ್ಕದ್ದು.

(2) ಮುಂಬಡ್ತಿಗಾಗಿ ಅಧಿಕಾರಿಯ ಮೆರಿಟ್ ಮತ್ತು ಸೂಕ್ತತೆಯನ್ನು ನಿರ್ಣಯಿಸುವ ಮಾನದಂಡಗಳು, ಈ ಕೆಳಕಂಡಂತೆ ಗರಿಷ್ಠ 125 ಅಂಕಗಳನ್ನು ಒಳಗೊಂಡಿರುತ್ತವೆ:

(ಎ) ಅಧಿಕಾರಿಯ ಮುಂಬಡ್ತಿಯನ್ನು ಪರಿಗಣಿಸಲಾಗುತ್ತಿರುವ ತಿಂಗಳ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಅಧಿಕಾರಿಯು ನೀಡಿದ ತೀರ್ಪುಗಳ ಮೌಲ್ಯಮಾಪನ - 90 ಅಂಕಗಳು;

(ಬಿ) ಅಧಿಕಾರಿಯ ಮುಂಬಡ್ತಿಯನ್ನು ಪರಿಗಣಿಸಲಾಗುತ್ತಿರುವ ವರ್ಷದ ಹಿಂದಿನ ಐದು ವರ್ಷಗಳ ಅವಧಿಗೆ ಅಧಿಕಾರಿಯ ವಾರ್ಷಿಕ ಗೌಪ್ಯ ವರದಿಗಳನ್ನು ಪರಿಗಣಿಸುವುದು - 20 ಅಂಕಗಳು;

(ಸಿ) ಅಧಿಕಾರಿಯ ಮುಂಬಡ್ತಿಯನ್ನು ಪರಿಗಣಿಸಲಾಗುತ್ತಿರುವ ವರ್ಷದ ಹಿಂದಿನ ಐದು ವರ್ಷಗಳ ಅವಧಿಗೆ ನಿಗದಿಪಡಿಸಿದ ಕೋಟಾದಲ್ಲಿ ಅಧಿಕಾರಿಯು ಪ್ರಕರಣಗಳನ್ನು ಇತ್ಯರ್ಥಪಡಿಸಿದ ಶೇಕಡಾವಾರು ಪ್ರಮಾಣವನ್ನು ಪರಿಗಣಿಸುವುದು - 15 ಅಂಕಗಳು.

(3) ಸಂಬಂಧಪಟ್ಟ ಅಧಿಕಾರಿಯು ತೀರ್ಪುಗಳನ್ನು ಬರೆಯದಿರುವ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅಥವಾ ಕಾರ್ಯ ನಿರ್ವಹಿಸಿದ್ದಲ್ಲಿ ಅಂದರೆ ಉಚ್ಚ ನ್ಯಾಯಾಲಯದಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ವೇದಿಕೆ ಅಥವಾ ಸರ್ಕಾರ ಮುಂತಾದವುಗಳಲ್ಲಿ ಪ್ರತಿನಿಯೋಜನೆ ಹುದ್ದೆ, ಅಂತಹ ನಿಯೋಜನೆಗಳಿಗೆ ಮೊದಲು ನೀಡಿದ ತೀರ್ಪುಗಳನ್ನು ಮತ್ತು ಮೊಕದ್ದಮೆಗಳನ್ನು ಇತ್ಯರ್ಥಪಡಿಸಿದ ಶೇಕಡಾವಾರು ಪ್ರಮಾಣವನ್ನು ಪರಿಗಣಿಸತಕ್ಕದ್ದು.

(4) ಮೇಲಿನ 2(ಎ) ರಿಂದ 2(ಸಿ) ವರೆಗಿನ ಖಂಡದ ಅಡಿಯಲ್ಲಿ ನಿಗದಿಪಡಿಸಿದ ಒಟ್ಟು ಅಂಕಗಳಲ್ಲಿ ಕನಿಷ್ಠ ಶೇಕಡಾ 50ರಷ್ಟು ಅಂಕಗಳನ್ನು ಪಡೆದ ಅಧಿಕಾರಿಗಳು ಜ್ಯೇಷ್ಠತೆಯ ಆಧಾರದ ಮೇಲೆ ಮುಂಬಡ್ತಿಯ ಪರಿಗಣನೆಗೆ ಅರ್ಹರಾಗಿರುತ್ತಾರೆ.

(5) ನಿಯಮ 4-ಸಿ ಯಲ್ಲಿ ಏನೇ ಇದ್ದರೂ, ಉಚ್ಚ ನ್ಯಾಯಾಲಯವು, ಮೇಲ್ಕಂಡ ಮೌಲ್ಯಮಾಪನದಲ್ಲಿ ಯಶಸ್ವಿಯಾದ ಅಧಿಕಾರಿಯ ಸಂಬಂಧದಲ್ಲಿ ವಾರ್ಷಿಕ ಗೌಪ್ಯ ವರದಿಗಳಲ್ಲಿ ದಾಖಲಾದ ಯಾವುದೇ ಷರಾಗಳನ್ನು ಮತ್ತು ಕಳೆದ ಐದು ವರ್ಷಗಳಲ್ಲಿ ನಿಗದಿಪಡಿಸಿದ ಒಟ್ಟು ಕೋಟಾದಲ್ಲಿ ಇತ್ಯರ್ಥಪಡಿಸಿದ ಶೇಕಡಾವಾರು ಪ್ರಮಾಣವನ್ನು ಪರಿಗಣಿಸಿದ ನಂತರ; ಮತ್ತು ಬಾಕಿಯಿರುವ ಅಥವಾ ಪರಿಗಣನೆಯಲ್ಲಿರುವ ದೂರುಗಳು ಮತ್ತು/ಅಥವಾ ಶಿಸ್ತಿನ ವಿಚಾರಣೆಗಳು ಯಾವುವಾದರೂ ಇದ್ದರೆ ಅವುಗಳ ಸ್ವರೂಪ ಮತ್ತು ಗಂಭೀರತೆಯನ್ನು ಪರಿಗಣಿಸಿದ ನಂತರ, ಅಧಿಕಾರಿಯು ಮುಂಬಡ್ತಿಗೆ ಅರ್ಹನಲ್ಲ ಅಥವಾ ಸೂಕ್ತನಲ್ಲ ಎಂಬ ಅಭಿಪ್ರಾಯಕ್ಕೆ ಬಂದರೆ, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ ಉಚ್ಚ ನ್ಯಾಯಾಲಯವು ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬಹುದು.

**4-ಡಿ. ಎಲ್‌ಡಿಸಿಇ ಮೂಲಕ ಕಡ್ಡಾಯವಾಗಿ ಮೆರಿಟ್ ಆಧಾರದ ಮೇಲೆ ಹಿರಿಯ ಸಿವಿಲ್ ನ್ಯಾಯಾಧೀಶರ ವೃಂದಕ್ಕೆ ಮುಂಬಡ್ತಿ ನೀಡುವ ಕಾರ್ಯವಿಧಾನ (ಶೇಕಡಾ 10ರಷ್ಟು ಪ್ರವರ್ಗ).-**

(1) ಮುಂಬಡ್ತಿಗಾಗಿ ಅಧಿಕಾರಿಯ ಮೆರಿಟ್ ಮತ್ತು ಸೂಕ್ತತೆಯನ್ನು ನಿರ್ಣಯಿಸುವ ಮಾನದಂಡಗಳು, ಈ ಕೆಳಕಂಡಂತೆ ಗರಿಷ್ಠ 125 ಅಂಕಗಳನ್ನು ಒಳಗೊಂಡಿರುತ್ತವೆ:

(ಎ) ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳ ಆಧಾರದ ಮೇಲೆ 100 ಅಂಕಗಳನ್ನು ಹೊಂದಿರುವ 3 ಗಂಟೆಗಳ ಅವಧಿಯ ಒಂದು ಪತ್ರಿಕೆಯಾಗಿರತಕ್ಕದ್ದು, ಎಂದರೆ:

(i) ಸಾಂವಿಧಾನಿಕ ಮತ್ತು ಸಿವಿಲ್ ಕಾನೂನುಗಳು.
(ii) ಕ್ರಿಮಿನಲ್ ಕಾನೂನುಗಳು.
(iii) ಭಾರತೀಯ ಸಾಕ್ಷ್ಯ ಅಧಿನಿಯಮ, 1872 ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ, 2023.
(iv) ವಿಶೇಷ ಕಾನೂನುಗಳು.

(ಬಿ) ಮೌಖಿಕ ಸಂದರ್ಶನ - 25 ಅಂಕಗಳು

ಅಧಿಕಾರಿಯನ್ನು ಈ ಕೆಳಗಿನ ಅಂಶಗಳ ಮೇಲೆ ಪರೀಕ್ಷಿಸತಕ್ಕದ್ದು, ಅವುಗಳೆಂದರೆ:-

(i) ಇಂದಿಕೃತ ಕಾನೂನು ಜ್ಞಾನ;
(ii) ಸಾಮಾನ್ಯ ಗ್ರಹಿಕೆಗಳು ಮತ್ತು ಅರಿವು; ಮತ್ತು
(iii) ಸಂವಹನ ಕೌಶಲ್ಯಗಳು.

(2) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕನಿಷ್ಠ 50 ಅಂಕಗಳನ್ನು ಪಡೆಯತಕ್ಕದ್ದು.

(3) ಲಿಖಿತ ಪರೀಕ್ಷೆಯಲ್ಲಿ ಯಶಸ್ವಿಯಾದ ಅಧಿಕಾರಿಗಳಲ್ಲಿ, ಸಾಧ್ಯವಾದಷ್ಟು ಮಟ್ಟಿಗೆ, ಅಧಿಸೂಚಿತ ಹುದ್ದೆಗಳ ಸಂಖ್ಯೆಯ ಮೂರು ಪಟ್ಟಿಗೆ ಸಮನಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿ ಮೌಖಿಕ ಸಂದರ್ಶನಕ್ಕೆ ಕರೆಯತಕ್ಕದ್ದು. ಮೌಖಿಕ ಸಂದರ್ಶನದಲ್ಲಿ ಯಶಸ್ವಿಯಾಗಲು ಅಧಿಕಾರಿಯು ಮೌಖಿಕ ಸಂದರ್ಶನಕ್ಕೆ ನಿಗದಿಪಡಿಸಿದ ಅಂಕಗಳಲ್ಲಿ ಕನಿಷ್ಠ ಶೇಕಡಾ 25ರಷ್ಟು ಅಂಕಗಳನ್ನು ಪಡೆಯತಕ್ಕದ್ದು.

(4) ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದಲ್ಲಿ ಪಡೆದ ಒಟ್ಟು ಅಂಕಗಳ ಆಧಾರದ ಮೇಲೆ, ಮೆರಿಟ್ ಅನುಕ್ರಮದಲ್ಲಿ, ಸಾಧ್ಯವಾದಷ್ಟು ಮಟ್ಟಿಗೆ, ಅಧಿಸೂಚಿತ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾಗಿರುವಷ್ಟು ಸಂಖ್ಯೆಯ ಅಧಿಕಾರಿಗಳನ್ನು ಒಳಗೊಂಡಂತೆ ಮುಂಬಡ್ತಿಗೆ ಅರ್ಹರಾಗಿರುವ ಅಧಿಕಾರಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(5) ಎಲ್‌ಡಿಸಿಇ ಯಲ್ಲಿ ಹಾಜರಾಗಲು ಗರಿಷ್ಠ 3 (ಮೂರು) ಪ್ರಯತ್ನಗಳನ್ನು ಮಾಡಬಹುದಾಗಿದೆ.

(6) ನಿಯಮ 4-ಡಿ ಯಲ್ಲಿ ಏನೇ ಇದ್ದರೂ, ಉಚ್ಚ ನ್ಯಾಯಾಲಯವು, ಲಿಖಿತ ಪರೀಕ್ಷೆಯಲ್ಲಿ ಹಾಗೂ ಮೌಖಿಕ ಸಂದರ್ಶನದಲ್ಲಿ ಯಶಸ್ವಿಯಾದ ಅಧಿಕಾರಿಯ ಸಂಬಂಧದಲ್ಲಿ ವಾರ್ಷಿಕ ಗೌಪ್ಯ ವರದಿಗಳಲ್ಲಿ ದಾಖಲಾದ ಯಾವುದೇ ಷರಾಗಳನ್ನು ಮತ್ತು ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಕೋಟಾದಲ್ಲಿ ಇತ್ಯರ್ಥಪಡಿಸಿದ ಶೇಕಡಾವಾರು ಪ್ರಮಾಣವನ್ನು ಪರಿಗಣಿಸಿದ ನಂತರ ಮತ್ತು ಬಾಕಿಯಿರುವ ಅಥವಾ ಪರಿಗಣನೆಯಲ್ಲಿರುವ ದೂರುಗಳು ಮತ್ತು/ಅಥವಾ ಶಿಸ್ತಿನ ವಿಚಾರಣೆಗಳು ಯಾವುವಾದರೂ ಇದ್ದರೆ ಅವುಗಳ ಸ್ವರೂಪ ಮತ್ತು ಗಂಭೀರತೆಯನ್ನು ಪರಿಗಣಿಸಿದ ನಂತರ, ಅಧಿಕಾರಿಯು ಮುಂಬಡ್ತಿಗೆ ಅರ್ಹನಲ್ಲ ಅಥವಾ ಸೂಕ್ತನಲ್ಲ ಎಂಬ ಅಭಿಪ್ರಾಯಕ್ಕೆ ಬಂದರೆ, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ ಉಚ್ಚ ನ್ಯಾಯಾಲಯವು ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬಹುದು.

**5. ನಿಯಮ 5ರ ತಿದ್ದುಪಡಿ**.- ಸದರಿ ನಿಯಮಗಳ 5ನೇ ನಿಯಮದಲ್ಲಿ,-

(i) ಉಪ-ನಿಯಮ (1)ಕ್ಕೆ, ಈ ಕೆಳಗಿನ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಎಂದರೆ:-

**"ಜಿಲ್ಲಾ ನ್ಯಾಯಾಧೀಶರ ನೇರ ನೇಮಕಾತಿಗೆ ಸಂಬಂಧಿಸಿದ ಕಾರ್ಯವಿಧಾನ"**

(ii) ಉಪ-ನಿಯಮ (1)ರಲ್ಲಿ,-

(ಎ) ಖಂಡ (1) ರ ಬದಲಾಗಿ ಈ ಕೆಳಗಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(1) ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು, ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳು ಅಥವಾ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಕನಿಷ್ಠ 50 ಅಂಕಗಳು ಮತ್ತು ಇತರರಿಗೆ ಕನಿಷ್ಠ 60 ಅಂಕಗಳಾಗಿರತಕ್ಕದ್ದು.

(ಬಿ) ಖಂಡ (2)ರ ಬದಲಾಗಿ ಈ ಕೆಳಗಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

(2) 150 ಅಂಕಗಳನ್ನು ಹೊಂದಿರುವ ಲಿಖಿತ ಪರೀಕ್ಷೆಯ ಪ್ರತಿ ಪತ್ರಿಕೆಯಲ್ಲಿ ಉತ್ತೀರ್ಣರಾಗಲು, ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳು ಅಥವಾ ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ 50 ಅಂಕಗಳು ಮತ್ತು ಇತರರಿಗೆ ಕನಿಷ್ಠ 60 ಅಂಕಗಳಾಗಿರತಕ್ಕದ್ದು. ಆದಾಗ್ಯೂ, ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳು/ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳು 300ಕ್ಕೆ 120 ಅಂಕಗಳನ್ನು ಮತ್ತು ಇತರರು 300ಕ್ಕೆ 150 ಅಂಕಗಳನ್ನು ಪಡೆದಿರಬೇಕು.

(ಸಿ) ಖಂಡ (4)ರ ಬದಲಾಗಿ ಈ ಕೆಳಗಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(4) ಮೌಖಿಕ ಸಂದರ್ಶನದಲ್ಲಿ ಕನಿಷ್ಠ ಶೇಕಡಾ 20 ರಷ್ಟು ಅಂಕಗಳನ್ನು ಪಡೆದ ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳು ಅಥವಾ ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಮತ್ತು ಕನಿಷ್ಠ ಶೇಕಡಾ 25ರಷ್ಟು ಅಂಕಗಳನ್ನು ಪಡೆದ ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳು ಅಥವಾ ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿಲ್ಲದ ಅಭ್ಯರ್ಥಿಗಳು, ಹುದ್ದೆಗಳಿಗೆ ಆಯ್ಕೆ ಮಾಡಲು ಪರಿಗಣನೆಗೆ ಅರ್ಹರಾಗಿರತಕ್ಕದ್ದು.

ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳು/ ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಯನ್ನು ಸಾಮಾನ್ಯ ಪ್ರವರ್ಗದ ಅಡಿಯಲ್ಲಿ ಆಯ್ಕೆಗೆ ಪರಿಗಣಿಸಲು ಪೂರ್ವಭಾವಿ ಪರೀಕ್ಷೆ, ಮುಖ್ಯ ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದಲ್ಲಿ ಈ ಕೆಳಗಿನಂತೆ ಕನಿಷ್ಠ ಅಂಕಗಳನ್ನು ಪಡೆಯಬೇಕು, ಅವುಗಳೆಂದರೆ:-

| | |
|---|---|
| ಪೂರ್ವಭಾವಿ ಪರೀಕ್ಷೆ | 60 ಅಂಕಗಳು |
| ಮುಖ್ಯ ಲಿಖಿತ ಪರೀಕ್ಷೆ | ಪ್ರತಿಯೊಂದು ಪತ್ರಿಕೆಗೆ 60 ಅಂಕಗಳು. ಆದಾಗ್ಯೂ, ಲಿಖಿತ ಪರೀಕ್ಷೆಯಲ್ಲಿ 300ಕ್ಕೆ ಒಟ್ಟು 150 ಅಂಕಗಳನ್ನು ಪಡೆದಿರತಕ್ಕದ್ದು. |
| ಮೌಖಿಕ ಸಂದರ್ಶನ | ಶೇಕಡಾ 25ರಷ್ಟು ಅಂಕಗಳು. |

(iii) ಉಪ-ನಿಯಮ II ಕ್ಕೆ ಈ ಮುಂದಿನ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಎಂದರೆ:-

**"ಸಿವಿಲ್ ನ್ಯಾಯಾಧೀಶರ ನೇರ ನೇಮಕಾತಿಗೆ ಸಂಬಂಧಿಸಿದ ಕಾರ್ಯವಿಧಾನ"**

(iv) ಉಪ-ನಿಯಮ II ರಲ್ಲಿನ, (1)ನೇ ಖಂಡದ (ಇ) ಉಪ-ಖಂಡದಲ್ಲಿ,-

(ಎ) ಬಾಬು (i)ಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(i) ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು, ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳು ಅಥವಾ ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ

ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಕನಿಷ್ಠ 50 ಅಂಕಗಳು ಮತ್ತು ಇತರರಿಗೆ ಕನಿಷ್ಠ 60 ಅಂಕಗಳಾಗಿರತಕ್ಕದ್ದು".

(ಬಿ) (ii) ಮತ್ತು (iii)ನೇ ಬಾಬುಗಳಿಗೆ ಬದಲಾಗಿ ಈ ಕೆಳಗಿನವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(ii) ಲಿಖಿತ ಪರೀಕ್ಷೆಯ ಪ್ರತಿಯೊಂದು ಪತ್ರಿಕೆಯಲ್ಲಿ ಉತ್ತೀರ್ಣರಾಗಲು, ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳು ಅಥವಾ ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಕನಿಷ್ಠ 40 ಅಂಕಗಳು ಮತ್ತು ಇತರರಿಗೆ ಕನಿಷ್ಠ 50 ಅಂಕಗಳಾಗಿರತಕ್ಕದ್ದು.

(iii) ಮೌಖಿಕ ಸಂದರ್ಶನದಲ್ಲಿ ಉತ್ತೀರ್ಣರಾಗಲು, ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳು ಅಥವಾ ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಕನಿಷ್ಠ ಶೇಕಡಾ 20ರಷ್ಟು ಅಂಕಗಳು ಮತ್ತು ಇತರರಿಗೆ ಕನಿಷ್ಠ ಶೇಕಡಾ 25ರಷ್ಟು ಅಂಕಗಳಾಗಿರತಕ್ಕದ್ದು:

ಪರಂತು, ಯಾವು ಅಭ್ಯರ್ಥಿಯು,-

(i) ಲಿಖಿತ ಪರೀಕ್ಷೆಯ ಯಾವುದೇ ಪತ್ರಿಕೆಯಲ್ಲಿ ಮೇಲೆ ನಿಗದಿಪಡಿಸಿದ ಕನಿಷ್ಠ ಅಂಕಗಳಿಗಿಂತ ಕಡಿಮೆ ಅಂಕ ಪಡೆದಿದ್ದರೆ, ಆತನು ಮೌಖಿಕ ಸಂದರ್ಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

(ii) ಲಿಖಿತ ಪರೀಕ್ಷೆಯ ಯಾವುದೇ ಪತ್ರಿಕೆಯಲ್ಲಿ ಅಥವಾ ಮೌಖಿಕ ಸಂದರ್ಶನದಲ್ಲಿ ಮೇಲೆ ನಿಗದಿಪಡಿಸಿದ ಕನಿಷ್ಠ ಅಂಕಗಳಿಗಿಂತ ಕಡಿಮೆ ಅಂಕ ಪಡೆದಿದ್ದರೆ, ಆತನು ಸಿವಿಲ್ ನ್ಯಾಯಾಧೀಶರ ನೇಮಕಾತಿಗೆ ಅರ್ಹನಾಗಿರತಕ್ಕದ್ದಲ್ಲ.

ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳು/ ಮಾನದಂಡಕ್ಕನುಗುಣವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಯನ್ನು ಸಾಮಾನ್ಯ ಪ್ರವರ್ಗದಡಿಯಲ್ಲಿ ಆಯ್ಕೆಗೆ ಪರಿಗಣಿಸಲು ಪೂರ್ವಭಾವಿ ಪರೀಕ್ಷೆ, ಮುಖ್ಯ ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದಲ್ಲಿ ಈ ಕೆಳಗಿನಂತೆ ಕನಿಷ್ಠ ಅಂಕಗಳನ್ನು ಪಡೆದಿರಬೇಕು:

| | |
|---|---|
| ಪೂರ್ವಭಾವಿ ಪರೀಕ್ಷೆ | 60 ಅಂಕಗಳು |
| ಮುಖ್ಯ ಲಿಖಿತ ಪರೀಕ್ಷೆ | ಪ್ರತಿಯೊಂದು ಪತ್ರಿಕೆಯಲ್ಲಿ 50 ಅಂಕಗಳು |
| ಮೌಖಿಕ ಸಂದರ್ಶನ | ಶೇಕಡಾ 25ರಷ್ಟು ಅಂಕಗಳು. |

(v) ಉಪ-ನಿಯಮ II ರ, (5)ನೇ ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(6) ಸಿವಿ ನ್ಯಾಯಾಧೀಶರ ಹುದ್ದೆಗೆ ನೇರ ನೇಮಕಾತಿಯ ಆಯ್ಕೆಯನುಸಾರ ನೇಮಕಗೊಂಡ ಅಭ್ಯರ್ಥಿಗಳು ನ್ಯಾಯಾಲಯದ ಪೀಠವನ್ನು ವಹಿಸಿಕೊಳ್ಳುವುದಕ್ಕೂ ಮೊದಲು, ಒಂದು ವರ್ಷಕ್ಕಿಂತ ಕಡಿಮೆಯಲ್ಲದ ಅವಧಿಯ ತರಬೇತಿಯನ್ನು ಕಡ್ಡಾಯವಾಗಿ ಪಡೆಯಬೇಕು.

**6. ಹೊಸ ನಿಯಮದ ಸೇರ್ಪಡೆ.**- ಸದರಿ ನಿಯಮಗಳಲ್ಲಿ, 5ನೇ ನಿಯಮದ ತರುವಾಯ ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:-

**"5-ಎ. ನೇರ ನೇಮಕಾತಿಗಾಗಿ ವೃತ್ತಿ ಪ್ರಮಾಣಪತ್ರ.-**

**(1) ಜಿಲ್ಲಾ ನ್ಯಾಯಾಧೀಶರು.-**

(i) ಅಭ್ಯರ್ಥಿಗೆ ವೃತ್ತಿ ಪ್ರಮಾಣಪತ್ರವನ್ನು ನೀಡಿದ ದಿನಾಂಕದಂದು ಅಭ್ಯರ್ಥಿಯು ನ್ಯಾಯವಾದಿ ವೃತ್ತಿಯಲ್ಲಿ ತೊಡಗಿದ್ದಾನೆಂದು ತಿಳಿಸುವ ಮತ್ತು ನಿರಂತರವಾದ ವೃತ್ತಿಯ ಅವಧಿಯನ್ನು ಸೂಚಿಸುವಂಥ:

(ಎ) ಅಭ್ಯರ್ಥಿಯು ಜಿಲ್ಲಾ ಮತ್ತು ಅಧಿವಿಚಾರಣಾ ನ್ಯಾಯಾಲಯಗಳಲ್ಲಿ ವೃತ್ತಿಯಲ್ಲಿ ತೊಡಗಿದ್ದರೆ, ವಾಸ್ತವವಾಗಿ ಆತನು ವೃತ್ತಿಯಲ್ಲಿ ತೊಡಗಿರುವಂಥ ನ್ಯಾಯಾಲಯದ ಪೀಠಾಸೀನ ಅಧಿಕಾರಿಯು ನೀಡಿದ;

(ಬಿ) ಅಭ್ಯರ್ಥಿಯು ಉಚ್ಚ ನ್ಯಾಯಾಲಯಗಳಲ್ಲಿ ವೃತ್ತಿಯಲ್ಲಿ ತೊಡಗಿದ್ದರೆ, ಆ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ (ನ್ಯಾಯಾಂಗ)/ ಹೆಚ್ಚುವರಿ ರಿಜಿಸ್ಟ್ರಾರ್ ಜನರಲ್‌ರವರು ನೀಡಿದ;

(ಸಿ) ಅಭ್ಯರ್ಥಿಯು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ವೃತ್ತಿಯಲ್ಲಿ ತೊಡಗಿದ್ದರೆ, ಈ ಉದ್ದೇಶಕ್ಕಾಗಿ ಭಾರತದ ಸರ್ವೋಚ್ಚ ನ್ಯಾಯಾಲಯವು ನಿಯೋಜಿಸಿರುವಂಥ ಅಧಿಕಾರಿಯು ನೀಡಿದ-

– ವೃತ್ತಿ ಪ್ರಮಾಣಪತ್ರವನ್ನು ಒದಗಿಸಬೇಕು:

(ii) ವೃತ್ತಿಯ ಅವಧಿಯನ್ನು ಲೆಕ್ಕ ಹಾಕುವಾಗ,-

(ಎ) ನ್ಯಾಯವಾದಿ ವೃತ್ತಿಯಲ್ಲಿ ತೊಡಗಿರುವ ಅಭ್ಯರ್ಥಿಯ ಸಂದರ್ಭದಲ್ಲಿ, ನ್ಯಾಯವಾದಿಯಾಗಿ ವೃತ್ತಿಯಲ್ಲಿ ತೊಡಗಿರುವ ನಿಕಟಪೂರ್ವದಲ್ಲಿ ದೇಶದ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ಪೂರ್ಣಾವಧಿಯ ಉದ್ಯೋಗದಲ್ಲಿ ಸರ್ಕಾರಿ ಅಭಿಯೋಜಕರು/ಸಹಾಯಕ ಸರ್ಕಾರಿ ಅಭಿಯೋಜಕರು/ಸರ್ಕಾರಿ ವಕೀಲರ ಹುದ್ದೆಯನ್ನು ಅವರು ಹೊಂದಿದ್ದ ಅವಧಿಯು, ಯಾವುದಾದರೂ ಇದ್ದರೆ, ಆ ಹಿಂದಿನ ಅವಧಿಯನ್ನೂ ಪರಿಗಣಿಸತಕ್ಕದ್ದು;

(ಬಿ) ದೇಶದ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ಪೂರ್ಣಾವಧಿಯ ಉದ್ಯೋಗದಲ್ಲಿ ಸರ್ಕಾರಿ ಅಭಿಯೋಜಕರು/ಸಹಾಯಕ ಸರ್ಕಾರಿ ಅಭಿಯೋಜಕರು/ಸರ್ಕಾರಿ ವಕೀಲರಾಗಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಯ ಸಂದರ್ಭದಲ್ಲಿ, ಅಂತಹ ನೇಮಕಾತಿಯ ನಿಕಟ ಪೂರ್ವದಲ್ಲಿ ಆತನು ನ್ಯಾಯವಾದಿಯಾಗಿ ವೃತ್ತಿಯಲ್ಲಿ ತೊಡಗಿದ್ದ ಅವಧಿಯು ಯಾವುದಾದರೂ ಇದ್ದರೆ, ಆ ಹಿಂದಿನ ಅವಧಿಯನ್ನೂ ಪರಿಗಣಿಸತಕ್ಕದ್ದು. ಅಂತಹ ಅಭ್ಯರ್ಥಿಯು ತನ್ನ ನೇಮಕಾತಿಯ ನಿಕಟ ಪೂರ್ವದಲ್ಲಿ ತಾನು ವೃತ್ತಿ ನಿರ್ವಹಿಸುತ್ತಿದ್ದ ನ್ಯಾಯಾಲಯದಿಂದ ಪಡೆದ ವೃತ್ತಿ ಪ್ರಮಾಣಪತ್ರವನ್ನು ಒದಗಿಸತಕ್ಕದ್ದು.

**(2) ಸಿವಿಲ್ ನ್ಯಾಯಾಧೀಶರು.-**

(i) ಅಭ್ಯರ್ಥಿಗೆ ಪ್ರಮಾಣಪತ್ರವನ್ನು ನೀಡಿದ ದಿನಾಂಕದಂದು ನ್ಯಾಯವಾದಿ ವೃತ್ತಿಯಲ್ಲಿ ತೊಡಗಿದ್ದಾನೆಂದು ತಿಳಿಸುವ ಮತ್ತು ನಿರಂತರವಾದ ವೃತ್ತಿಯ ಅವಧಿಯನ್ನು ಸೂಚಿಸುವಂಥ:

(ಎ) ಅಭ್ಯರ್ಥಿಯು ದೇಶದ ಜಿಲ್ಲಾ ಮತ್ತು ಅಧಿವಿಚಾರಣಾ ನ್ಯಾಯಾಲಯಗಳಲ್ಲಿ ವೃತ್ತಿ ನಿರತನಾಗಿದ್ದರೆ, ಆತನು ವಾಸ್ತವವಾಗಿ ವೃತ್ತಿಯಲ್ಲಿ ತೊಡಗಿರುವ ನ್ಯಾಯಾಲಯದ ಪ್ರಧಾನ ನ್ಯಾಯಾಂಗ ಅಧಿಕಾರಿಯು ನೀಡಿದ; ಅಥವಾ ಅಂತಹ ನ್ಯಾಯಾಲಯದಲ್ಲಿ ಕನಿಷ್ಠ ಹತ್ತು ವರ್ಷಗಳ ವೃತ್ತಿಯಲ್ಲಿರುವ ನ್ಯಾಯವಾದಿಯು ನೀಡಿದ, ಅದಕ್ಕೆ ಜಿಲ್ಲೆಯ ಅಥವಾ ಆ ಸ್ಥಳದ ಪ್ರಧಾನ ನ್ಯಾಯಾಂಗ ಅಧಿಕಾರಿಯಿಂದ ಕ್ರಮಬದ್ಧವಾಗಿ ಹಿಂಬರಹ ಪಡೆದಿರುವ;

(ಬಿ) ಅಭ್ಯರ್ಥಿಯು ಭಾರತದ ಸರ್ವೋಚ್ಚ ನ್ಯಾಯಾಲಯ/ಉಚ್ಚ ನ್ಯಾಯಾಲಯಗಳಲ್ಲಿ ವೃತ್ತಿಯಲ್ಲಿ ತೊಡಗಿದ್ದರೆ, ಸಂದರ್ಭಾನುಸಾರ, ಕನಿಷ್ಠ ಹತ್ತು ವರ್ಷಗಳ ವೃತ್ತಿಯಲ್ಲಿರುವ ನ್ಯಾಯವಾದಿಯು ನೀಡಿದ, ಅದಕ್ಕೆ ಭಾರತದ ಸರ್ವೋಚ್ಚ ನ್ಯಾಯಾಲಯ/ ಉಚ್ಚ ನ್ಯಾಯಾಲಯಗಳು ಈ ಉದ್ದೇಶಕ್ಕಾಗಿ ಗೊತ್ತುಪಡಿಸಿದ ಅಧಿಕಾರಿಯಿಂದ ಕ್ರಮಬದ್ಧವಾಗಿ ಹಿಂಬರಹ ಪಡೆದಿರುವ, –

– ವೃತ್ತಿ ಪ್ರಮಾಣಪತ್ರವನ್ನು ಒದಗಿಸಬೇಕು.

(ii) ವೃತ್ತಿಯ ಅವಧಿಯನ್ನು ಲೆಕ್ಕ ಹಾಕುವಾಗ,-

(ಎ) ನ್ಯಾಯವಾದಿ ವೃತಿಯಲ್ಲಿ ತೊಡಗಿರುವ ಅಭ್ಯರ್ಥಿಯ ಸಂದರ್ಭದಲ್ಲಿ, ನ್ಯಾಯವಾದಿಯಾಗಿ ವೃತ್ತಿಯಲ್ಲಿ ತೊಡಗಿರುವ ನಿಕಟಪೂರ್ವದಲ್ಲಿ ದೇಶದ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ಪೂರ್ಣಾವಧಿಯ ಉದ್ಯೋಗದಲ್ಲಿ ಸರ್ಕಾರಿ ಅಭಿಯೋಜಕರು /ಸಹಾಯಕ ಸರ್ಕಾರಿ ಅಭಿಯೋಜಕರು /ಸರ್ಕಾರಿ ವಕೀಲರ ಹುದ್ದೆಯನ್ನು ಅವರು ಹೊಂದಿದ್ದ ಅವಧಿಯು, ಯಾವುದಾದರೂ ಇದ್ದರೆ, ಆ ಹಿಂದಿನ ಅವಧಿಯನ್ನೂ ಪರಿಗಣಿಸತಕ್ಕದ್ದು;

(ಬಿ) ದೇಶದ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ಪೂರ್ಣಾವಧಿಯ ಉದ್ಯೋಗದಲ್ಲಿ ಸರ್ಕಾರಿ ಅಭಿಯೋಜಕರು/ಸಹಾಯಕ ಸರ್ಕಾರಿ ಅಭಿಯೋಜಕರು /ಸರ್ಕಾರಿ ವಕೀಲರಾಗಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಯ ಸಂದರ್ಭದಲ್ಲಿ, ಅಂತಹ ನೇಮಕಾತಿಯ ನಿಕಟಪೂರ್ವದಲ್ಲಿ ಆತನು ನ್ಯಾಯವಾದಿಯಾಗಿ ವೃತ್ತಿಯಲ್ಲಿ ತೊಡಗಿದ್ದ ಅವಧಿಯು ಯಾವುದಾದರೂ ಇದ್ದರೆ, ಆ ಹಿಂದಿನ ಅವಧಿಯನ್ನು ಪರಿಗಣಿಸತಕ್ಕದ್ದು. ಅಂತಹ ಅಭ್ಯರ್ಥಿಯು ತನ್ನ ನೇಮಕಾತಿಯ ನಿಕಟಪೂರ್ವದಲ್ಲಿ ತಾನು ವೃತ್ತಿ ನಿರ್ವಹಿಸುತ್ತಿದ್ದ ನ್ಯಾಯಾಲಯದಿಂದ ಪಡೆದ ವೃತ್ತಿ ಪ್ರಮಾಣಪತ್ರವನ್ನು ಒದಗಿಸತಕ್ಕದ್ದು;

(ಸಿ) ಸಂಬಂಧಪಟ್ಟ ರಾಜ್ಯದ ವಕೀಲರ ಪರಿಷತ್ತಿನಲ್ಲಿ ಅಭ್ಯರ್ಥಿಯ ತಾತ್ಕಾಲಿಕ ಸೇರ್ಪಡೆ/ ನೋಂದಣಿಯ ದಿನಾಂಕವನ್ನು ಪರಿಗಣಿಸತಕ್ಕದ್ದು; ಮತ್ತು

(ಡಿ) ಅಭ್ಯರ್ಥಿಯು ದೇಶದ ಯಾವುದೇ ನ್ಯಾಯಾಧೀಶರು ಅಥವಾ ನ್ಯಾಯಾಂಗ ಅಧಿಕಾರಿಗಳೊಂದಿಗೆ ಕಾನೂನು ಗುಮಾಸ್ತ/ಸಂಶೋಧನಾ ಸಹಾಯಕರಾಗಿ ಕೆಲಸ ಮಾಡಿದ ಅವಧಿ, ಯಾವುದಾದರೂ ಇದ್ದರೆ, ಅದನ್ನೂ ಪರಿಗಣಿಸತಕ್ಕದ್ದು"

**7. 11-ಎ ಮತ್ತು 11-ಬಿ ಹೊಸ ನಿಯಮಗಳ ಸೇರ್ಪಡೆ.-** ಸದರಿ ನಿಯಮಗಳ 11ನೇ ನಿಯಮದ ನಂತರ, ಈ ಕೆಳಗಿನ ಹೊಸ ನಿಯಮಗಳನ್ನು ಸೇರಿಸತಕ್ಕದ್ದು, ಅವುಗಳೆಂದರೆ:–

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



"**11-ಎ. ನಿಯಮಾವಳಿಗಳು**.- ಈ ನಿಯಮಗಳ ಜೊತೆಗೆ, ಉಚ್ಚ ನ್ಯಾಯಾಲಯವು ಮುಂಬಡ್ತಿಗಾಗಿ ಅಧಿಕಾರಿಯ ಮೆರಿಟ್ ಅನ್ನು ನಿರ್ಣಯಿಸಲು ಸೂಕ್ತತಾ ಪರೀಕ್ಷೆಯ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಅಥವಾ ಮಾರ್ಗಸೂಚಿಗಳನ್ನು ರೂಪಿಸಬಹುದು.

**11-ಬಿ. ಅರ್ಥವಿವರಣೆ**.- ಈ ನಿಯಮಗಳ ಅರ್ಥವಿವರಣೆಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಆ ಬಗ್ಗೆ ಉಚ್ಚ ನ್ಯಾಯಾಲಯದ ತೀರ್ಮಾನವೇ ಅಂತಿಮವಾಗಿರತಕ್ಕದ್ದು."

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಲಿತ)
ಸರ್ಕಾರದ ಅಪರ ಕಾರ್ಯದರ್ಶಿ(ಆಡಳಿತ-1)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH